Regd No M 1299 Sri ತಾ|| 20—10—51

SATYAVADI = 35th Year

ಸಂಪಾದಕರು- ಆಕಾಶವಾಣಿ ಸಿಬ್ಬಂದಿದಾರ್ ಎಂ. ವಿ. ಸುಬ್ರಹ್ಮಣ್ಯರು [ಬಿಡಿ ಪ್ರತಿ 3 ಪೈ

ಈಜಿಪ್ಟಿನಲ್ಲಿ ಬ್ರಿಟೀಷರ ವಿರುದ್ಧ ಅಸಹಕಾರ

ಬ್ರಿಟಿಷ್ ಸಾಮಾನುಗಳನ್ನು ಬಹಿಷ್ಕರಿಸುವ ಒತ್ತಾಯ ಮಾಡುವ ದೊಡ್ಡ ಚಳುವಳಿಯನ್ನು ಬ್ರಿಟೀಷರ ವಿರುದ್ಧ ಈಜಿಪ್ಟು ನಿನ್ನೆ ಪ್ರಾರಂಭಿಸಿತೆಂದು ಕೈರೊ ವಾರ್ತೆ

ನಿನ್ನೆ ದಿವಸ ದೆಹಲಿಯ ಸತ್ಯವತಿನಗರದಲ್ಲಿ ಸಮಾವೇಶವಾಗಿದ್ದ ಅಖಿಲ ಭಾರತ ಸಂಸ್ಥಾನಿ ಪ್ರಜಾಪರಿಷತ್ತು ಪರಿಷತ್ತನ್ನು ರದ್ದು ಮಾಡುವ ನಿರ್ಣಯ ಮಾಡಿತು

ಅಂಬಾಲಾದಲ್ಲಿ ಮಾಸ್ಟರ್ ತಾರಾಸಿಂಗ್ ನಿನ್ನೆ ಹೇಳಿಕೆ ಕೊಟ್ಟಿ ಲಿಯಾ ಕತ್ ರವರ ಕೊಲೆಗು ಪರಿಣಾಮಗಳನೇಕವಾಗಬಹುದು, ಸಿಕ್ಕರು ಎಚ್ಚರದಿಂದಿ ರಬೇಕು ಎಂದರು

ಮೈಸೂರು ವಿಧಾನಸಭೆಯ ವಿಶೇಷಾಧಿವೇಶನ ಶ್ರೀ ಟಿ ನರಸಿಂಹಯ್ಯಂಗಾ ರ್ಯರ ಅಧ್ಯಕ್ಷತೆಯಲ್ಲಿ ಸೇರಿ ಪಾಕಿಸ್ತಾನ ಪ್ರಧಾನಿ ಲಿಯಾಕತ್ ಅಲಿ ನಿಧನಕ್ಕೆ ಸಂತಾಪ ಸೂಚಕ ನಿರ್ಣಯ ಮಾಡಿ ಸಭೆ ಮೌನದಿಂದ ಸ್ವಲ್ಪ ಕಾಲ ನಿಂತಿತ್ತು

ಡೆಹರಾಡೂನಿನಲ್ಲಿ ನಿನ್ನೆ ಪ್ರಸಿದ್ಧ ನಿಗ್ರೋ ಪಾದ್ರಿ ಡಾ|| ಜೆ.ಸಿ. ರಾಬಿನ್ಸ್ ಹೇಳಿಕೆಯ ತ್ತು ಅವೀರಿಕದಲ್ಲಿ ನಿಗ್ರೋಗಳೊಡನೆ ಭಾರತೀಯರು ಅಧಿಕ ವಾಗಿ ಬೆರೆಯುತ್ತಿಲ್ಲವೆಂದು ತಿಳಿಸಿರುವರು

ಮೈಸೂರಿನ ಅಚಾರ್ಯ ಕೃಪಾಲಿನಿ ಪಕ್ಷದ ಅಧ್ಯಕ್ಷರು ಲಿಯಾಕತ್ ಅಲಿ ನಿಧನಕ್ಕೆ ಸಂತಾಪಸೂಚನೆ ಕಳಿಸಿದ್ದಾರೆ

ಶ್ರೀ ವಿ ಬಾಲರತ್ನಂರವರು ಜಾಮೀನು ಬೇಡಿ ಅರ್ಜಿ ಹಾಕಿದ್ದನ್ನು ಮೈಸೂರು ಹೈಕೋರ್ಟ್ ತಳ್ಳಿಹಾಕಿತೆಂದು ಬೆಂಗಳೂರು ವಾರ್ತೆ

ಪ್ಯಾರಿಸಿನಲ್ಲಿ ಸೇರಲಿರುವ ವಿಶ್ವಸಂಸ್ಥೆ ಅಧಿವೇಶನದ ವರಿಗೆ ಕಾಶ್ಮೀರ ಚರ್ಚೆ ವಾಯಿದೆ ಹೋಯಿತೆಂದು ಫ್ರಷಿಂಗ್‌ಮೆಡೋ ವಾರ್ತೆ

ಮೊನ್ನೆ ಗುದ್ರಾವತಿಯಲ್ಲಿ ಕೃಷ್ಣವಾರ್ತಿಯೆಂಬ ಇಪ್ಪತ್ತಾರು ವರ್ಷದ ಶಹಣಿ ಮೂವತ್ತಾರು ವರ್ಷದ ತನ್ನ ಅತ್ತಿಗೆ ರಾಜಮ್ಮನನ್ನು ಹಾರೆಯಿಂದ ಹೊಡೆದುಕೊಂಡು ಪೋಲೀಸರಿಗೆ ಶರಣಾಗತನಾದ! ಅವನು ತನ್ನ ಅತ್ತಿಗೆಯನ್ನ ಬಲಾತ್ಕರಿಸಲು ಆಕೆ ಸಮ್ಮತಿಸಲಿಲ್ಲವಂತೆ !

ಹಿಂದೂಕೋಡ ವಿಧೇಯಕವನ್ನು ನೂತನ ಪಾರ್ಲಿಮೆಂಟಿನಲ್ಲಿ ಪರಿಶೀ ಲಿಸಲಾಗುವದೆಂದು ಪಂ|| ನೆಹರು ದೆಹಲಿಯಲ್ಲಿ ತಿಳಿಸಿದ್ದಾರೆ

ರಾಷ್ಟ್ರೀಯ ಚೀನದ ಮುಖ್ಯಮಂತ್ರಿ ಜನರಲ್ ಚೆಕ್‌ಜೆಂಗರು ರಾಜೀ ನಾಮೆ ಕೊಟ್ಟಿದ್ದಾರೆ

ಮೈಸೂರಿನಲ್ಲಿ ಕೃಪ್ಲಾನಿ ಭಾಷಣ

ಅಖಿಲ ಭಾರತ ಕಿಸಾನ್ ಮಜದೂರ್ ಪ್ರಜಾಪಕ್ಷದ ನಾಯಕರಾದ ಆಚಾರ್ಯ ಕೃಪಾಲಿನಿಯವರು ತಾ|| 23 ನೇ ಮಂಗಳವಾರ ಮೈಸೂರು ಪುರಭವನ ದಲ್ಲಿ ಸಂಜೆ ಭಾಷಣ ಮಾಡಲಿದ್ದಾರೆ ಅಂದು ಬೆಳಿಗ್ಗೆ ಅವರಿಲ್ಲಿಗೆ ಬರುವರು

ಇಂಡೋ - ಪಾಕ್ ಬಾಂಧವ್ಯ ಕೆಡಬಹುದು

ಭಾರತ ಪಾಕಿಸ್ತಾನಗಳ ಸಾಮ್ಯ ಸ್ವರೂಪ ಮಾಯವಾಗುವದೇ ಲಿಯಾ ಕತ ಅಲಿ ಮರಣದಿಂದುಂಟಾಗಬಹುದಾ ದ ಪರಿಣಾಮ ಎಂದು ದೆಹಲಿ ರಾಜಕೀ ಯ ವೃತ್ತಗಳಲ್ಲಿ ಅಭಿಪ್ರಾಯವಿದೆ ಇ ನ್ನು ಮೇಲೆ ಎರಡೂ ರಾಷ್ಟ್ರಗಲ್ಲಿ ಘ ರ್ಷಣೆ ಹೆಚ್ಚಬಹುದು.

× ಮೈಸೂರು ಮಾಜಿ ಘಟನಾ ಸ ಮಿತಿ ಉಪಾಧ್ಯಕ್ಷ ಶ್ರೀ ಗಾಂಜಿ ವೀರ ಪ್ಪ ಮೈಸೂರು ಕಾಂಗ್ರೆಸ್ ಉಮೇದು ವಾರ ಪಟ್ಟಿ ವಿರುದ್ಧ ಅಪೀಲು ಮಾಡ ಲಿರುವರು.

ಕನ್ನಡ ಕಲಾರಂಗದ ಅಮೋಘ ಕಾಣಿಕೆ !

— ತಿಲೋತ್ತಮೆ —

[ಬರೆದು ಬಂದುದು]

ಮೈಸೂರಿನ ಶ್ರೀ ಚಾಮುಂಡೇಶ್ವರಿ ಮತ್ತು ಶ್ರೀ ಗಣೇಶ ಚಿತ್ರಮಂದಿರಗಳಲ್ಲಿ ಸುಖಸಂಪತ್ ಚಿತ್ರಪಥದವರು ಕನ್ನಡಿಗ ರಿಗೆ ಕಾಣಿಕೆಯಾಗಿತ್ತಿರುವ ತಿಲೋತ್ತಮೆ ಕನ್ನಡ ಮನೋನ್ನತ ಚಿತ್ರ ಈಗೆಂಡು ವಾರಗಳಿಂದ ಜನಪ್ರಿಯವಾಗಿ ಜರಗು ತ್ತಿದೆ ಚಿತ್ರದ ಬಗೆಗೆ ಕನ್ನಡಿಗರ ಅಭಿ ಮಾನ, ಹೆಮ್ಮೆ ಇಂತಕ್ಕುದು ಸಹಜ ವೈ ಮೈಸೂರಿನ ನವಜ್ಯೋತಿ ಸ್ಟೂಡಿಯೋ ದಲ್ಲಿ, ವೈ ಮೈಸೂರಿನ ನಟನಟಿಯರ ವೈವಿಧ್ಯ ಸವೇತ ಈ ಚಿತ್ರ ಸಿದ್ಧವಾಗಿ ಪ್ರದರ್ಶಿ ಸಲ್ಪಡುತ್ತಿದೆ.

ಪುರಾಣದ ಒಂದು ಕತೆಯನ್ನು ನಾ ಡಿನ ಮಂದಿಗೆ ಚನ್ನಾಗಿ ಅರ್ಥವಾಗು ವಂತೆ, ಸರಳವಾಗಿ ಸಂಭಾಷಣೆಗಳನ್ನು ಪ್ರಖ್ಯಾತ ಕತೆಗಾರರಾದ ಶ್ರೀ ಸರೋಜ ದ್ವಬಾಬು ರವರು ಹೆಣೆದು ಚಿತ್ರನೋಟ ಕರಿಗೆ ಆಕರ್ಷಣೆಯನ್ನುಂಟು ಮಾಡಿ ದ್ದಾರೆ. ಸುಂದೋಪಸುಂದರ ಪಾತ್ರ ಅತ್ಯಂತ ಚಮತ್ಕಾರದಿಂದ ಅಭಿನಯಿಸ ಲ್ಪಟ್ಟಿದೆ ಅವರ ಅಭಿನಯ ಉದ್ರೇಕ ಕದಿಂದ ಕೂಡಿದ್ದೆ ನೋಟಕರ ಮೇಲೆ ತುಂಬಾ ಪರಿಣಾಮ ಉಂಟು ಮಾಡು ತ್ತದೆ ಇದೇ ಕಲೆಯ ಸಲ್ಲಕ್ಷಣ. ಶ್ರೀ ಕೊಟ್ಟೂರಪ್ಪನವರ ಪಾಲಿಗೆ ಬಂದ ನಾರದನ ಪಾತ್ರ ಈ ಪಾತ್ರ ತುಂಬಾ ಅಮೋಘವಾದದ್ದು. ಇಡೀ ಕತೆಗೆ ಇದೇ ಪ್ರಧಾನವಾದದ್ದು. ಈ ಪಾತ್ರ ದಲ್ಲಿ ಅಭಿನಯ ಸ್ವಲ್ಪ ಕೆಟ್ಟಿದ್ದರೂ ಇಡೀ ತಿಲೋತ್ತಮೆ ಕುಸಿಯುತ್ತಿದ್ದಿತು. ಕರ್ನಾಟಕ ನಾಟಕ ರಂಗವುಂಟಪದಲ್ಲಿ ಹೆಸರಾಂತ ಶ್ರೀ ಕೊಟ್ಟೂರಪ್ಪನವರು ನಾರದನ ಪಾತ್ರದಲ್ಲಾಗಲಿ, ಸುಂದೋ ಪಸುಂದರನ್ನು ಪರಸ್ಪರ ವಿರೋಧಿಗಳ ನ್ನಾಗಿ ಮಾಡುವ ಮಹತ್ವವೂರ್ಣ ಅಭಿ ನಯದಲ್ಲಾಗಲಿ ಯಾವ ಲೋಪವನ್ನೂ ತರುವುದಿಲ್ಲ

ಈ ಚಿತ್ರದ ನೃತ್ಯ ನಿರ್ದೇಶಕರು ಶ್ರೀ ರಾಜಗೋಪಾಲ್. ಎಂಥೆಂಥಾ ನೇ ತ್ಯಾನಂದಕರ ನೃತ್ಯಗಳನ್ನು ಇಲ್ಲಿಗೆ ಇತ್ತಿ ದ್ದಾರೆ. ವಿಷ್ಣುವಿನ ಆಸ್ಥಾನದಲ್ಲಿ ಬಾಲಿಕೆಯರ ನೃತ್ಯ, ಮೋಹಿನಿ ಭಸ್ಮಾ ಸುರ ನೃತ್ಯ, ತಿಲೋತ್ತಮೆಯಿಂದ ಸುಂದೋಪಸುಂದರ ಸನಿಹದಲ್ಲಿ ಜರುಗುವ ನೃತ್ಯ ಅವರ್ಣನೀಯ !

ಶ್ರೀಗಳಾದ ಸುಬ್ಬಣ್ಣ ಹಾಗೂ ಸು ರೇಂದ್ರನಾಥಪಂಡಿತರ ಹಾಸ್ಯಾಭಿನಯ ವೂ ಸಮಯೋಚಿತವಾಗಿ ಚಿತ್ರದಲ್ಲಿ ಜೋಡಣೆಯಾಗಿದೆ ವಿಚಿತ್ರ, ಕುಂ ಭೋದರರ ಪಾತ್ರವನ್ನು ಇವರು ಯಶ ಸ್ವಿಯಾಗಿ ಅಭಿನಯಿಸಿದ್ದಾರೆ.

ಸಂಗೀತ ದಿಗ್ದರ್ಶನ, ಶಬ್ದಗ್ರಹಣ, ಛಾಯಾಗ್ರಹಣ ಉತ್ತಮವಾಗಿವೆ. ಕ ರ್ನಾಟಕದ ಚಿತ್ರರಂಗದ ಭವಿಷ್ಯ ದಿನೇ ದಿನೇ ಉತ್ತಮಗೊಳ್ಳುತ್ತಿದೆ ಎಂಬುದನ್ನ ಈ ಚಿತ್ರದ ದಿಗ್ದರ್ಶನದಲ್ಲಿ ಶ್ರೀ ಆರ್. ಎಂ. ವೀರಭದ್ರಯ್ಯನವರು ತೋರಿದ್ದಾರೆ

ಉಡುಪುಗಳು, ದೃಶ್ಯಗಳು ಚಿತ್ರಕ್ಕೆ ಸರಿಹೊಂದಿದೆ.

ತಿಲೋತ್ತಮೆ ಅಮೋಘ ಕಲಾ ಕೃತಿ. ಪ್ರತಿಯೊಬ್ಬರೂ ಈ ಚಿತ್ರವನ್ನ ನೋಡಬೇಕಾದ್ದು.

ನಾಡನುಡಿಯ ಬಗ್ಗೆ ಕನ್ನಡಿಗರ ಅಭಿ ಮಾನ ಇರಬೇಕಷ್ಟು ಇಲ್ಲದಿರುವ ಈ ಹೊತ್ತಿನಲ್ಲಿ, ಇಡೀ ಕರ್ನಾಟಕಕ್ಕೆಲ್ಲ ಏಕಮಾತ್ರ ಚಿತ್ರ ನಿರ್ಮಾಪಕ ಸಂಸ್ಥೆ ಕನ್ನಡಿಗರ ಹೊಣೆಯಲ್ಲಿಯೇ ನವ ಜ್ಯೋತಿ ಸ್ಟೂಡಿಯೋ ಇದ್ದಾಗ್ಯೂ, ಕೆಲವು ಕನ್ನಡ ಚಿತ್ರ ತಯಾರಕರು ಮಾ ಡಿದಂತೆ ಬೇರೆ ಪ್ರಾಂತ್ಯ ಸ್ಟೂಡಿಯೋ ಎಗೆ ಗಮನ ಕೊಡದೆ ಸುಖಸಂಪತ್ ಚಿ ತ್ರಪಥದವರು ತಮ್ಮ ಈ ಚಿತ್ರವನ್ನು ನಮ್ಮೂರಲ್ಲಿ, ನಮ್ಮ ಭಾಷೆಯಲ್ಲಿ ತಯಾ ರಿಸಿರುವುದನ್ನು ಕನ್ನಡಿಗರು ಆದರಿಸಬೇಕು.

ಸುಖಜೀವನವಾದ, ನೀತಿಪತನ

[ಮುಂದುವರಿದುದು]

ಬಾಲಕರ ಪ್ರೌಢಶಾಲೆಗಳ ಮಾತು ಹಾಗಿರಲಾಗಿ ಬಾಲಕಿಯರ ಪ್ರೌಢಶಾಲೆಗಳಲ್ಲಿ ಕನ್ನಡ ವಿಷಯಂ ಇಲ್ಲವೇ ಇಲ್ಲ (ಬೆಂಗಳೂರಿನಲ್ಲಿ ನೋಡಿ) ಹೆಣ್ಣುಮಕ್ಕಳ ತಂದೆತಾಯಂದಿರು ತಮ್ಮ ಮಕ್ಕಳು ನಾಗರೀಕರೆನಿಸಬೇಕಾದರೆ ಅವರು ಇಂಗ್ಲೀಷ ವಿಷಯವೇ ತೆಗೆದುಕೊಳ್ಳಬೇಕೆಂದು ನಂಬಿದ್ದಾರೆ. ಪ್ರಶ್ನೆಮಾಡಿದರೆ, ಕಲ್ಚರ್ ಸ್ಟ್ಯಾಂಡರ್ಡ್ ಇಂಬೇಕಾದರೆ ಇಂಗ್ಲೀಷು ವಿಷಯಂ ಇರಲೇಬೇಕು ಅನ್ನುತ್ತಾರೆ ಇನ್ನು ಕೆಲವು ಮಂದಿ ಸುಖಜೀವನವಾದಿಗಳು, ಸ್ವಾಮಿ ನಮ್ಮ ಮಕ್ಕಳಿಗೆ ಮದುವೆಯಾಗಬೇಡವೆ? ಗಂಡಂದಿರು ಕನ್ನಡ ನಾಡಿನಲ್ಲೇ ಇಂಬೇಕೆಂಬ ಶಾಸ್ತ್ರವೇನಾದೂ ಉಂಟೆ? ಕೆಲಸ ಎಲ್ಲಿ ಸಿಕ್ಕಿದರೆ ಅಲ್ಲಿಗೆ ಹೋಗಬೇಕು ಹೋದ ಕಡೆಯಲ್ಲೆಲ್ಲ ಕನ್ನಡವೇ ಇರುತ್ತದೆಯೆ? ಇತ್ಯಾದಿ. ಇತ್ಯಾದಿಯಾಗಿ ಸಮಾಧಾನ ಕೊಡುವ ಸಾಹಸ ಮಾಡುತ್ತಾರೆ ಟಂಬಕ್ಕು, ಪಾಕಿಸ್ತಾನಗಳಲ್ಲೂ ನಮ್ಮ ಹೆಣ್ಣು ಮಕ್ಕಳ ವಿವಾಹಕ್ಕೆ ಮಾರ್ಕೆಟ್ ಒದಗಿ ಬಂತಿರಬೇಕು!

ಈ ಜಾಡ್ಯ ಕೇವಲ ಪಟ್ಟಣಗಳು ಮಹಾನಗರಗಳಲ್ಲಿ ಮಾತ್ರ ಮನೆ ಮಾಡಿದೆಯೆಂದು ಭಾವಿಸಬಾರದು; ಹಳ್ಳಿಗಾಡುಗಳಲ್ಲಿಯೂ ಹರಡಿದೆ; ಚೆನ್ನಾಗಿ ಬೇರುಬಿಟ್ಟಿದೆ; ಗೋವಿಂದನೂರು ತಾಲ್ಲೂಕ (ಕೋಲಾರ ಜಿಲ್ಲೆ) ಮಂಚೇನಹಳ್ಳಿಯಲ್ಲಿ ಸಾರ್ವಜನಿಕ ಶಿಕ್ಷಣ ಸಂಸ್ಥೆಯವರೊಬ್ಬರು ಪ್ರೌಢಶಾಲೆಯನ್ನು ಸ್ಥಾಪಿಸುವ ಪ್ರಯತ್ನ ಮಾಡಲು ಊರಿನವರೆಲ್ಲ 'ನಮಗೆ ಇಂಗ್ಲೀಷು ವಿಷಯಂ ಬೇಕು, ಕನ್ನಡ ವಿಷಯಂ ಬೇಡ' ಅಂದ ಬಿಟ್ಟರು! ಶಾಲಾ ಸ್ಥಾಪನೆಯ ಉತ್ಸಾಹಿಗಳಾದ ಆ ಸಂಸ್ಥೆಯವರು ಜನರು ಅಪೇಕ್ಷಿಸಿದಂತೆ ನಾವು ನಡೆದುಕೊಳ್ಳವುದೇ ನ್ಯಾಯ, ಎಂದು ತರ್ಕಮಾಡಿ ಅದರಂತೆಯೇ ನಡೆದುಕೊಂಡರು.

(ಕನ್ನಡ ನುಡಿಯಿಂದ)

SHAKTI SUDHA

A Superb Tonic

ಗೋ ಸಂರಕ್ಷಣೆ ಮಾಡಿ



Protect the Cow

— ಜನಪ್ರಿಯ 2 ನೇ ವಾರ —

ಚಾಮುಂಡೇಶ್ವರಿ ಮತ್ತು ಗಣೇಶ ಟಾಕೀಸುಗಳಲ್ಲಿ

ಸುಖಸಂಪತ್ ಚಿತ್ರಪಟದವರ ಸುಂದರ ಪೌರಾಣಿಕ ಚಿತ್ರ

ತಿಲೋತ್ತಮೆ (ಕನ್ನಡ)

ಭೂಮಿಕೆ— ಜಯಶ್ರೀ, ಜಿ. ಆರ್. ಸ್ವಾಮಿರಾವ್, ಕಲಾವಿಶಾರದ ಕೊಟ್ಟೂರಪ್ಪ ಎಶ್ವೇಶ್ವರಯ್ಯ, ಎಂ. ಎಸ್. ಸುಬ್ಬಯ್ಯ, ಸುರೇಂದ್ರನಾಥ್ ಪಂಡಿತ್

ಪ್ರತಿ ದಿನ 3 ಆಟಗಳು

— SUKH SAMPATH CHITRAPAT Release
Asoka Road, Mysore

ಅಪೇರ— ಕೀರ್ತಿಯುತ 4 ನೇ ವಾರ

ನಿರ್ವಾಧಿಕಾರಿ

ಪಾತ್ರ — ಅಂಜಲಿದೇವಿ, ನಾಗಯ್ಯ, ರಾಮಚಂದ್ರ, ನಂಬಿಯಾರ್

ಮಹೋನ್ನತ ತಮಿಳು ಚಿತ್ರ ಪ್ರತಿ ದಿನ 3 ಆಟಗಳು

ಬೆಳಗಿನ ಪ್ರದರ್ಶನ 19—10—51 ರಿಂದ ಸಿಂಗಾರ್ (ಹಿಂದಿ)

ರಣಜಿತ್ ಅಮೋಘ 4 ನೇ ವಾರ

ಶಬಿನಾ

ಪಾತ್ರ: ಶ್ಯಾಂ, ನಸೀಂ, ಸಪ್ರೂ, ಕಕ್ಕೂ

ಮನಮೋಹನ ಹಿಂದಿ ಚಿತ್ರ ಪ್ರತಿ ದಿನ 3 ಆಟಗಳು

ಬೆಳಗಿನ ಪ್ರದರ್ಶನ 19-10-51 ರಿಂದ ಆಧಿರಾತ್ (ಹಿಂದಿ)

ಉಡ್‌ಲಾಂಡ್ಸ್

ಜಯಪ್ರದ 3 ನೇ ವಾರ

ಶ್ರೀ ಗಣೇಶ ಜನ್ಮ

ಪೂಪರಾಯ್, ತ್ರಿಲೋಕ್ ಕಪೂರ್

ಪ್ರತಿ ಸಂಸಾರವೂ ನೋಡಲೇಬೇಕಾದ ಅಮೋಘ ಪೌರಾಣಿಕ ಹಿಂದಿ ಚಿತ್ರ

ಪ್ರತಿದಿನ 3 ಪ್ರದರ್ಶನಗಳು

Edited, Printed and Published by Dharma Prachara Nirata M. S. Krishna Rao. at the Satyavadi Press Chamrajpuram Mysore